ಲೂಸ್ ಸಾಯಿಲ್ ಎಂದು ಏನು ಹೇಳಿದ್ದೀರಿ ಅದು ಸರಿಯಲ್ಲ. ಅಲ್ಲಿ ಕೆಂಪು ಮಣ್ಣು ಇದೆ. ಬೇಕಾದರೆ ತಾವು ಆ ಭಾಗಕ್ಕೆ ಒಂದು ಸಾರಿ ಟೂರ್ ಹಾಕಿ ಹೋಗಿ ನೋಡಿದರೆ ನಂತರ ತಮಗೇ ಗೊತ್ತಾಗುತ್ತದೆ. ಆ ಕೆರೆಗಳನ್ನು ಕಟ್ಟಲಿಕ್ಕೆ ಏನೂ ತೊಂದರೆಯಾಗಲಾರದು. ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಆ ಕೆಲಸವನ್ನೂ ಮಾಡಿಕೊಡುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಬೇಕಾದರೆ ಮತ್ತೊಮ್ಮೆ ಪರಿಶೀಲನೆ ಮಾಡೋಣ. ಆದರೆ ನಾವು ತಜ್ಞರ ಅಭಿಪ್ರಾಯದ ವಿರುದ್ಧವಾಗಿ ಹೋಗುವುದಕ್ಕಾಗುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ಚಾಂಗ್ಲೇರು ಕೆರೆ ಮಾಡುವುದಕ್ಕೆ ಪಂಜೂರಾತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಸವರಾಜ ಪಾಟೀಲ್.—ಕೆಂಗಕೊಡಗು ಕೆರೆ ಯಾವ ಸ್ಟೇಜ್‌ನಲ್ಲಿದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅದು ಪರಿಶೀಲನೆಯ ಹಂತದಲ್ಲಿದೆ. ಫೀಸಿಬಲ್ ಅಂದರೆ ಅದನ್ನೂ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇರುವುದರಿಂದ ಅದಾದ ಮೇಲೆ ತೆಗೆದುಕೊಳ್ಳುವುದಕ್ಕೆ ಯೋಜನೆ ಮಾಡುತ್ತೇವೆ.

ಧಾರವಾಡ ಜಿಲ್ಲೆಯಲ್ಲಿಯ ಕ್ರಮಪಡಿಸಿದ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ಬಗ್ಗೆ

97. ಶ್ರೀ ಎಂ ಜಿ. ಜರತಾರಗರ (ಹುಬ್ಬಳ್ಳಿ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಧಾರವಾಡ ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರಾಟಗಳ ಸಂಘಗಳೆಷ್ಟು ಹಾಗೂ ಅವು ಯಾವುವು ;

(ಆ) ಮೇಲ್ಕಂಡ ಎ.ಪಿ.ಎಂ.ಸಿ. ಮಾರುಕಟ್ಟೆಗಳ 1980 ರಿಂದ 1982ರ ಅವಧಿಯ ಉತ್ಪನ್ನದ ಒಟ್ಟು ಮೊತ್ತವೆಷ್ಟು ; ಸದರಿ ಆದಾಯದ ವರ್ಷವಾರು ಪ್ರತಿ ಮೊತ್ತವೆಷ್ಟು ವಿವರಗಳನ್ನು ತಿಳಿಸುವುದು ;

(ಇ) ಮೇಲ್ಕಂಡ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ 1980 ರಿಂದ 1982 ರ ವರೆಗೆ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚು ಮಾಡಲಾಗಿದೆ, ಆ ಹಣದ ಮೊತ್ತ ಎಷ್ಟು ;

(ಈ) ಮೇಲ್ಕಂಡ ಎ.ಪಿ.ಎಂ.ಸಿ ಕಮಿಟಿ ಹುಬ್ಬಳ್ಳಿ ಹಾಗೂ ಧಾರವಾಡ ಸ್ಥಮುಖ ಪಟ್ಟಣಗಳಲ್ಲಿ ಅಕ್ಕಪಕ್ಕದ ಹಳ್ಳಿಗಳಿಂದ ರೈತರು ತರುವ ಸರಕುಗಳಿಗೆ ರಹದಾರಿಗಳಿಗಾಗಿ ವ್ಯಯ ಮಾಡಿದ ಹಣ ಎಷ್ಟು ಹಾಗೂ ರಸ್ತೆ ಮಾಡಿದ ವಿವರ ತಿಳಿಯಪಡಿಸುವಿರಾ ;

(ಉ) ಹುಬ್ಬಳ್ಳಿ ಧಾರವಾಡ ಎ.ಪಿ.ಎಂ.ಸಿ.ಗೆ ಸೆಸ್ಸು ಬರತಕ್ಕದ್ದು ಹಾಗೂ 1978 ರಿಂದ 1982ರ ವರೆಗೆ ಬಂದಿರುವ ಬಾಕಿ ಹಣವೆಷ್ಟು ? ಬಾಕಿ ಹಣ ಉಳಿಯಲು ಕಾರಣವೇನು ತಿಳಿಯಪಡಿಸುವಿರಾ ?

ಶ್ರೀ ಆರ್ ಎಲ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).—

(ಅ) ಧಾರವಾಡ ಜಿಲ್ಲೆಯಲ್ಲಿ 15 ಮಾರುಕಟ್ಟೆ ಸಮಿತಿಗಳು ಇವೆ. ವಿವರಗಳ ತಃಖ್ತೆ ಲಗತ್ತಿಸಲಾಗಿದೆ. (ತಃಖ್ತೆ 1)

(ಆ) ವಿವರದ ತಃಖ್ತೆಯನ್ನು ಲಗತ್ತಿಸಲಾಗಿದೆ. (ತಃಖ್ತೆ 2)

(ಇ) ವಿವರದ ತಃಖ್ತೆಯನ್ನು ಲಗತ್ತಿಸಲಾಗಿದೆ. (ತಃಖ್ತೆ 3)

(ಈ) ಕಾನೂನಿನಲ್ಲಿ ಅವಕಾಶವಿಲ್ಲದ್ದರಿಂದ ಅಂತಹ ಯಾವ ರಸ್ತೆಗಳನ್ನೂ ಮಾಡಿಲ್ಲ.

(ಉ) ತಃಖ್ತೆಯನ್ನು ಲಗತ್ತಿಸಲಾಗಿದೆ (ತಃಖ್ತೆ 4) ವ್ಯಾಪಾರಸ್ಥರು ರೂ. 2 ರೂ. ಗಳಂತೆ ಮಾರ್ಕೆಟ್ ಶುಲ್ಕ ಕೊಡಲು ತಕರಾರು ಮಾಡಿ ರಾಜ್ಯದ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದರಿಂದ ಬಾಕಿ ಹಣ ಉಳಿಯಿತು.

ತಃಖ್ತೆ—೧

ಧಾರವಾಡ ಜಿಲ್ಲೆಯಲ್ಲಿರುವ ವ್ಯವಸಾಯೋತ್ಪನ್ನ ಮಂಖ್ಯೆ ಮಾರುಕಟ್ಟೆ ಸಮಿತಿಗಳು ಮತ್ತು ಉಪ ಮಾರುಕಟ್ಟೆಗಳ ವಿವರ ತೋರಿಸಂವೆ ತಖ್ತೆ.

ಕ್ರಮಂ ಸಂಖ್ಯೆ	ಮಾರುಕಟ್ಟೆಗಳ ಹೆಸರು	ಮುಖ್ಯ ಮಾರುಕಟ್ಟೆಯ ಹೆಸರು	ಉಪ ಮಾರುಕಟ್ಟೆಯ ಹೆಸರು
೧.	ಹುಬ್ಬಳ್ಳಿ	ಹುಬ್ಬಳ್ಳಿ	ಅ) ಕಲಘಟಗಿ ಆ) ಶಿಗ್ಗಾಂವ
೨.	ಧಾರವಾಡ	ಧಾರವಾಡ	ಅ) ಅಳ್ನಾವಕ
೩.	ಗದಗ	ಗದಗ	ಅ) ಮುಂಡಗುಂದ ಆ) ಹುಲಕೋಟಿ
೪.	ಹಾನಗಲ್	ಹಾನಗಲ್	ಅ) ಅಕ್ಕಿ ಆಲೂರ
೫.	ಹಾವೇರಿ	ಹಾವೇರಿ	ಅ) ಗುತ್ತಲ
೬.	ಹಿರೇಕೆರೂರ	ಹಿರೇಕೆರೂರ	ಅ) ರಟ್ಟಿಹಳ್ಳಿ ಆ) ಮಸೂರ ಇ) ಹಂಸಬಾವಿ
೭.	ಮುಂಡರಗಿ	ಮುಂಡರಗಿ	ಅ) ಡಂಬಳ
೮.	ಕುಂದಗೋಳ	ಕುಂದಗೋಳ	ಅ) ಗುಡಗೇರಿ ಆ) ಸಂಶಿ
೯.	ನರಗುಂದ	ನರಗುಂದ	...
೧೦.	ಬ್ಯಾಡಗಿ	ಬ್ಯಾಡಗಿ	...
೧೧.	ಅಣ್ಣಿಗೇರಿ	ಅಣ್ಣಿಗೇರಿ	ಅ) ನವಲಗುಂದ
೧೨.	ರಾಣೇಬೆನ್ನೂರು	ರಾಣೇಬೆನ್ನೂರ	ಅ) ಹಲಗೇರಿ
೧೩.	ಹೊಳೆಆಲೂರು	ಹೊಳೆಆಲೂರು	ಅ) ರೋಣ ಆ) ಗಜೇಂದ್ರಗಡ ಇ) ನರೇಗಲ್ ಈ) ಸೂಡಿ
೧೪.	ಸವಣೂರ	ಸವಣೂರ	...
೧೫.	ಲಕ್ಷ್ಮೇಶ್ವರ	ಲಕ್ಷ್ಮೇಶ್ವರ	ಅ) ಶಿರಹಟ್ಟಿ ಆ) ಬೆಳ್ಳಟ್ಟಿ ಇ) ಶಿಗ್ಲಿ

ಅನುಬಂಧ—೨]

೧೯೮೦-೮೧ ಮತ್ತು ೧೯೮೧-೮೨ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಮಾರುಕಟ್ಟೆ ಸಮಿತಿಗಳ ವರಮಾನವನ್ನು ತೋರಿಸುವ ತಃಖ್ತೆ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಮಾರುಕಟ್ಟೆ ಸಮಿತಿಗಳ ಹೆಸರು	ವಾರ್ಷಿಕ ವರಮಾನ	
		೧೯೮೦-೮೧	೧೯೮೧-೮೨
೧.	ಹುಬ್ಬಳ್ಳಿ	೪೧.೯೬	೪೬.೬೩
೨.	ಧಾರವಾಡ	೧೧.೩೪	೧೨.೨೫
೩.	ಗದಗ	೩೧.೬೬	೩೩.೭೨
೪.	ಹಾನಗಲ್	೧.೩೩	೧.೩೩
೫.	ಹಾವೇರಿ	೮.೮೫	೭.೬೭
೬.	ಹಿರೇಕೆರೂರ	೩.೦೫	೨.೯೦
೭.	ಮುಂಡರಗಿ	೨.೪೩	೨.೫೯
೮.	ಕುಂದಗೋಳ	೪.೭೫	೩.೧೧
೯.	ನರಗುಂದ	೪.೧೧	೭.೪೬
೧೦.	ಬ್ಯಾಡಗಿ	೯.೩೦	೧೨.೬೭
೧೧.	ಆಣ್ಣಿಗೇರಿ	೪.೬೮	೩.೯೩
೧೨.	ರಾಣೇಬೆನ್ನೂರು	೧೧,೫೧	೧೧.೬೭
೧೩.	ರೋಣ	೨.೭೮	೩.೬೯
೧೪.	ಸವಣೂರ	೨.೫೩	೨.೬೮
೧೫.	ಲಕ್ಷ್ಮೇಶ್ವರ	೫.೪೪	೪.೬೬
	ಒಟ್ಟು :	೧೪೫.೭೨	೧೫೬.೯೬

ತಃಖ್ತೆ : ೩

೧೯೮೦-೮೧ ಮತ್ತು ೧೯೮೧-೮೨ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿರುವ ಮಾರುಕಟ್ಟೆಗಳ ವಿಶಾಲ ಬಾಬತ್ತಿನ ಖರ್ಚುಗಳನ್ನು ತೋರಿಸುವ ತಃಖ್ತೆ.

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಮಾರುಕಟ್ಟೆ ಸಮಿತಿಯ ಹೆಸರು	೧೯೮೦-೮೧			೧೯೮೧-೮೨		
		ಸಾಮಾನ್ಯ	ಅಭಿವೃದ್ಧಿ	ಒಟ್ಟು	ಸಾಮಾನ್ಯ	ಅಭಿವೃದ್ಧಿ	ಒಟ್ಟು
೧.	ಹುಬ್ಬಳ್ಳಿ	೧೬.೯೮	೧೬.೨೫	೩೩.೨೩	೧೬.೯೦	೫.೬೯	೨೨.೫೯
೨.	ಧಾರವಾಡ	೬.೦೯	೧.೭೦	೭.೭೯	೫.೮೨	೧.೫೨	೭.೩೪
೩.	ಗದಗ	೧೩.೭೭	೭.೨೧	೨೦.೯೮	೧೨.೬೦	೧೮.೫೨	೩೧.೧೨
೪.	ಹಾನಗಲ್	೦.೭೩	—	೦.೭೩	೦.೭೩	—	೦.೭೩
೫.	ಹಾವೇರಿ	೬.೪೭	೦.೫೭	೭.೦೪	೫.೪೭	೦.೦೬	೫.೫೩
೬.	ಹಿರೇಕೆರೂರು	೨.೦೦	೦.೧೫	೨.೧೫	೧.೮೫	೦.೪೬	೨.೩೧
೭.	ಮುಂಡರಗಿ	೧.೧೦	—	೧.೧೦	೧.೨೫	—	೧.೨೫
೮.	ಕುಂದಗೋಳ	೨.೭೨	೧.೬೫	೪.೩೭	೧.೭೩	೦.೪೩	೨.೧೬
೯.	ನರಗುಂದ	೧.೩೪	೪.೩೭	೫.೭೧	೨.೫೭	೨.೮೦	೫.೩೭
೧೦.	ಬ್ಯಾಡಗಿ	೪.೨೩	೧.೦೨	೫.೨೫	೫.೦೬	೦.೦೨	೫.೦೮
೧೧.	ಅಣ್ಣಿಗೇರಿ	೨.೦೫	—	೨.೦೫	೧.೨೭	೦.೦೪	೧.೩೧
೧೨.	ರಾಣೇಬೆನ್ನೂರು	೫.೬೩	೧.೮೩	೭.೪೫	೫.೫೮	೦.೨೪	೫.೮೨
೧೩.	ರೋಣ	೨.೧೪	೨.೦೬	೪.೨೦	೧.೯೨	೦.೧೭	೨.೦೯
೧೪.	ಸವಣೂರು	೧.೧೬	೦.೧೨	೧.೨೮	೦.೮೭	೦ ೧೮	೧.೦೫
೧೫.	ಲಕ್ಷ್ಮೇಶ್ವರ	೩.೩೧	೩.೦೨	೬.೩೩	೨.೮೯	೦.೬೫	೩.೫೪
	ಒಟ್ಟು ರೂ :	೬೯.೭೧	೩೯.೯೫	೧೦೯.೬೬	೬೬.೫೧	೩೦.೭೮	೯೭.೨೯

ತಃಖ್ತೆ ನಂ. ೪

೩೧–೧೨–೧೯೮೨ ರಂದು ವಸೂಲಾಗಬೇಕಾಗಿರುವ ಮಾರಂಕಟ್ಟೆ ಶುಲ್ಕದ ಪೈಕಿ ವಸೂಲಿಯಾದ ರಖಿಮಂ ಮತ್ತು ಬಾಕಿ ಇರುವ ರಖಿಮಂ.

(ರೂ. ಲಕ್ಷದಲ್ಲಿ)

ಮಾರುಕಟ್ಟೆ ಸಮಿತಿಯ ಹೆಸರು	೧೯೭೮–೭೯ ರಿಂದ ೧೯೮೧–೮೨ ರವರೆಗಿನ ವಸೂಲಿಯಾಗಬೇಕಾದ ಶುಲ್ಕ	೩೧–೧೨–೧೯೮೨ ರವರೆಗೆ ವಸೂಲಿಯಾದ ಬಾಕಿ ಶುಲ್ಕ	ವಸೂಲಾಗಬೇಕಾಗಿರುವ ಬಾಕಿ ಶುಲ್ಕ	ಬಾಕಿ ಶುಲ್ಕ ವಸೂಲಾಗದೆ ಇರುವ ಬಗ್ಗೆ ಕಾರಣಗಳು
ಹುಬ್ಬಳ್ಳಿ	೨೯.೪೩	೧೪.೨೮	೧೫.೧೫	ಹೆಚ್ಚಿನ ಶೇ. ೧೮ ಮಾರಂಕಟ್ಟೆ ಶುಲ್ಕವನ್ನು ಉಚ್ಚನ್ಯಾಯಾಲಯದ
ಧಾರವಾಡ	೯.೧೮	೨.೪೪	೬.೭೪	ತಡೆಯಾಜ್ಞೆ ಇದ್ದುದರಿಂದ ವಸೂಲಿ ಮಾಡಲಾಗಲಿಲ್ಲ.

ಶ್ರೀ ಎಂ. ಜಿ. ಜರತಾರಗರ.—ಸ್ವಾಮಿ, ಹುಬ್ಬಳ್ಳಿ. ಶಿಗ್ಗಾವಿ ಮಂತ್ತು ಕಲಘಟಗಿ ಇವು ಮೂರಕ್ಕೂ ಸೇರಿದ ಹಾಗೆ ಒಂದೇ ಒಂದು ಮಾರಾಟ ಸಂಘ ಇದೆ. ಹುಬ್ಬಳ್ಳಿ ವ್ಯಾಮುಖ್ಯವಾದ ನಗರವಾಗಿರುವುದರಿಂದ ಪ್ರತ್ಯೇಕವಾಗಿಯೇ ಅಲ್ಲಿಗೊಂದು ಘಟಕವನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ —ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಆ ಬಗ್ಗೆ ಸದ್ಯದಲ್ಲಿಯೇ ಹೇಳುವುದಕ್ಕೆ ಬರುವುದಿಲ್ಲ. ಅಲ್ಲಿ ಚುನಾವಣೆ ಮಾಡಿದ ಮೇಲೆ ಆ ಬಗ್ಗೆ ವಿಚಾರ ವಿನಿಮಯ ಮಾಡಿ ಆ ಕೆಲಸವನ್ನು ಕೈಗೊಳ್ಳಬೇಕಾಗುತ್ತದೆ.

ಶ್ರೀ ಎಂ. ಜಿ. ಜರತಾರಗರ.—ಸ್ವಾಮಿ, ಹುಬ್ಬಳ್ಳಿ ನಗರ ೩½ ಲಕ್ಷ ಪ್ರಜಾಸಂಖ್ಯೆ ಇರತಕ್ಕಂಥಾ ದೊಡ್ಡ ನಗರ. ಈ ದೃಷ್ಟಿಯಿಂದ ಅಲ್ಲಿ ಒಂದು ಮಾರಾಟ ಸಂಘ ಇರುವುದು ಅವಶ್ಯಕ. ಇನ್ನು ೩ ತಿಂಗಳೊಳಗಾದರೂ ಕೂಡ ಅಲ್ಲಿ ಒಂದೂ ಸೆಪರೇಟ್ ಆಗಿ ಮಾರಾಟ ಸಂಘವನ್ನು ಕೊಡುವ ಹಾಗೆ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ನಾನು ಮೊದಲೇ ಹೇಳಿದ ಹಾಗೆ ಆ ವಿಚಾರ ಸರ್ಕಾರದ ಗಮನದಲ್ಲಿದೆ; ಅದನ್ನು ಮುಂದೆ ವಿಚಾರ ಮಾಡುತ್ತೇನೆ.

ಶ್ರೀ ಎಂ. ಜಿ. ಜರತಾರಗರ.—ಸ್ವಾಮಿ, ಅಲ್ಲಿರತಕ್ಕಂಥಾ ವ್ಯಾಪಾರಸ್ಥರಂ ರೈತರಿಗೆ ಮೋಸ ಮಾಡುವುದಲ್ಲದೆ ಸರ್ಕಾರಕ್ಕೂ ಕೂಡ ಬರಬೇಕಾದಂಥಾ ಮಾರ್ಕೆಟಿಂಗ್ ಸೆಸ್ ಮತ್ತು ಇತರ ತೆರಿಗೆಗಳಂ ಏನು ಇವೆ ಅದನ್ನು ಅವಾಯಿಡ್ ಮಾಡುವುದಕ್ಕೆ ಬೇನಾಮಿ ಹೆಸರಿನಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಬೇಕಾದಷ್ಟು ತೆರಿಗೆ ನಷ್ಟವಾಗುತ್ತಾ ಇರುವುದರಿಂದ ಈ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಆ ವಿಷಯ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕೋಸ್ಕರವಾಗಿ ಒಂದು ಸ್ಕ್ವಾಡ್ ಮಾಡಬೇಕೆನ್ನುವ ಯೋಚನೆ ಇದೆ. ಅದರ ಬಗ್ಗೆ ಆದಷ್ಟು ತೀವ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಜಿ. ಜರತಾರಗರ.—ನಾನು ಮೊದಲೇ ಹೇಳಿದ ಹಾಗೆ ಬೇನಾಮಿ ಹೆಸರಿನಲ್ಲಿ ಈ ತರಹ ವ್ಯಾಪಾರ ಮಾಡಿಕೊಂಡು ಸರ್ಕಾರಕ್ಕೂ ವಂಚನೆ ಮಾಡಿ, ರೈತರಿಗೂ ವಂಚನೆ ಮಾಡಿ ವ್ಯಾಪಾರ ಮಾಡುತ್ತಿದ್ದಾರೆ ಅವರ ಮೇಲೆ ಈಗ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಕೆಲವು ಸಂದರ್ಭಗಳಲ್ಲಿ ಇಂತಹ ಘಟನೆಗಳು ಅಧಿಕಾರಿಗಳ ಗಮನಕ್ಕೆ ಬಂದಾಗ ಅವರಿಗೆ ಹೆಚ್ಚು ಪರಿ ಜುಲ್ಮಾನೆಯನ್ನು ವಿಧಿಸಿದ್ದಾರೆ. ಒಂದು ಲಾರಿಗೆ ೪೦೦–೫೦೦ ರೂಪಾಯಿ ಜುಲ್ಮಾನೆ ಹಾಕಿದರೂ ಕೂಡ ಅವರು ಸಂತೋಷದಿಂದ ಕೊಟ್ಟುಬಿಟ್ಟು ಹೋಗುತ್ತಾರೆ. ಇದರಿಂದ ನನಗೇನು ಅನ್ನಿಸುತ್ತದೆ ಎಂದರೆ ಇದು ಬಹಳ ವರ್ಷದಿಂದಲೂ ನಡೆದುಕೊಂಡು ಬರುತ್ತಿದೆಯೋ ಏನೋ ಎಂದು ನನಗೆ ಅನಿಸುತ್ತದೆ. ಈ ಬಗ್ಗೆ ಅಲ್ಲಿಗೊಂದು ವಿಜಿಲೆನ್ಸ್ ಸ್ಕ್ವಾಡ್ ಹಾಕಿ ಅದನ್ನು ತಡೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎ. ನಡಾಫ್.—ಸ್ವಾಮಿ, ಶಿಗ್ಗಾವಿ ಮತ್ತು ಕಲಘಟಗಿಗೆ ಬೇರೆ ಬೇರೆ ಮಾರಾಟ ಸಂಘ ಮಾಡಬೇಕೆನ್ನುವುದರ ಬಗ್ಗೆ ಪ್ರಪೋಸಲ್ಸ್ ಏನಾದರೂ ಬಂದಿದೆಯೇ ಮಂತ್ತು ಇದರ ಬಗ್ಗೆ ನೋಟಿಫಿಕೇಷನ್ ಏನಾದರೂ ಹೊರಡಿಸಿದ್ದೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಪ್ರಪೋಸಲ್ಸ್ ಬಂದಿರುವುದು ನನ್ನ ಗಮನಕ್ಕೆ ಬಂದಿಲ್ಲ ವೆಂದ ಮೇಲೆ ನೋಟಿಫಿಕೇಷನ್ ಕೂಡ ಆಗಿಲ್ಲ.

ಶ್ರೀ ಎಸ್. ಪಿ. ಗಂಗಾಧರಪ್ಪ.—ಈಗ ಮಾರ್ಕೆಟ್ ಸೆಸ್ ೨ ಪರ್ಸೆಂಟ್ ಏನು ಇದೆ ಅದನ್ನು ೧ ಪರ್ಸೆಂಟ್‌ಗೆ ಇಳಿಸುವುದಕ್ಕೆ ಬೇಡಿಕೆಗಳು ಏನಾದರೂ ಬಂದಿವೆಯೇ ? ಬಂದಿದ್ದರೆ ಅದರ ಬಗ್ಗೆ ಏನು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೀರಾ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಬೇಡಿಕೆಗಳು ಬಂದಿರುವುದು ನಿಜ. ಆದರೆ ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡ್‌ನಲ್ಲಿ ನಾವು ಕೆಲವು ಸೌಲಭ್ಯಗಳನ್ನು ರೈತರಿಗೆ ಕೊಡಬೇಕಾದರೆ ಇನ್ನೂ ಹಣ ಜಾಸ್ತಿ ಖರ್ಚು ಮಾಡಬೇಕಾಗುತ್ತದೆ, ಅವರಿಗೆ ಎಲ್ಲಾ ಸವಲತ್ತುಗಳನ್ನೂ ಕೊಟ್ಟ ಮೇಲೆ ಅದರ ಬಗ್ಗೆ ಇಳಿಸುವ ಯೋಚನೆ ಮಾಡಬಹುದು.

ಶ್ರೀ ಬಸವರಾಜ ಪಾಟೀಲ್.—ನಮ್ಮ ರಾಯಚೂರು ಜಿಲ್ಲೆಯ ಲಿಂಗಸುಗೂರು, ದೇವದುರ್ಗ, ತಾಲ್ಲೂಕುಗಳು ಏನು ಇವೆ ಇವೆರಡನ್ನೂ ಕೂಡ ಸಿಂಧನೂರು ಮಾರ್ಕೆಟ್ ಯಾರ್ಡ್‌ಗೆ ಸೇರಿಸಿರುವುದರಿಂದ ತೊಂದರೆಯಾಗುತ್ತದೆ. ಇದನ್ನು ಬೇರೆ ಬೇರೆಯಾಗಿ ಆಯಾಯ ಕ್ಷೇತ್ರಕ್ಕೆ ಒಂದೊಂದು ಮಾರ್ಕೆಟ್ ಮಾಡಿಕೊಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಅದಕ್ಕೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಈ ತರಹ ಪ್ರಾಬ್ಲಮ್ಸ್ ಎಲ್ಲೆಲ್ಲಿ ಬರುತ್ತವೆ, ಅಲ್ಲಲ್ಲಿ ಡಿವೈಡ್ ಮಾಡಿಕೊಡಬೇಕು ಎಂದು ಕೆಲವರು ಕೇಳಿದ್ದಾರೆ. ಮುಂದೆ ಅದರ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ಶ್ರೀ ಸಂಗಮೇಶ್ವರ ಸರ್ದಾರ್.—ರಾಯಚೂರು ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಮಾರ್ಕೆಟ್ ಸೆಸ್ ಎರಡು ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಿದ್ದು ಆ ಹಣವನ್ನು ಮಾರ್ಕೆಟ್ ರಸ್ತೆಗಳನ್ನು ಮಾಡಿಸುವುದಕ್ಕಾಗಲೀ, ಅಥವಾ ಇತರೆ ಯಾವ ಕೆಲಸಗಳನ್ನು ಮಾಡಿಸುವುದಕ್ಕಾಗಲಿ ಯೋಜನೆಗಳನ್ನು ಅವರು ತೆಗೆದುಕೊಂಡಿಲ್ಲ. ಇದರ ಬಗ್ಗೆ ತಾವು ಅವರಿಗೆ ಸೂಚನೆಯನ್ನೇನಾದರೂ ಕೊಡುವಿರಾ ?

ಶ್ರೀ ಆರ್. ಎಲ್. ಜಾಲಪ್ಪ.— ಮೊದಲು ಮಾರ್ಕೆಟ್ ಕಮಿಟಿಯವರು ರಸ್ತೆಗಳನ್ನು ಮಾಡಬೇಕೆಂದು ಈ ಹಣವನ್ನು ಕಲೆಕ್ಟ್ ಮಾಡಿದರು. ಆದರೆ ೧೯೭೮ರಲ್ಲಿ ಹೈಕೋರ್ಟಿನವರು ರಸ್ತೆಗಳನ್ನು ಮಾಡುವ ಕೆಲಸ ಕಾಮಗಾರಿ ಇಲಾಖೆಗೆ ಸೇರಿದ್ದುದು, ಮಾರ್ಕೆಟ್ ಕಮಿಟಿಯವರು ರಸ್ತೆಗಳನ್ನು ಮಾಡಬಾರದು ಎಂದು ಹೇಳಿದ್ದರಿಂದ ಅದನ್ನು ಹಾಗೆಯೇ ಬಿಡಲಾಗಿದೆ.

ಶ್ರೀ ಸಂಗಮೇಶ್ವರ್ ಸರ್ದಾರ್.—ರಸ್ತೆಗಳಿಗೋಸ್ಕರ ಕಲೆಕ್ಟ್ ಮಾಡಿದ ಹಣ ಏನಾಯಿತು ?

ಶ್ರೀ ಆರ್. ಎಲ್. ಜಾಲಪ್ಪ.—ಆ ಹಣ ಮಾರ್ಕೆಟ್ ಫಂಡ್‌ನಲ್ಲಿದೆ. ಬೇರೆ ಕೆಲಸಗಳಿಗೆ ಅದನ್ನು ಉಪಯೋಗ ಮಾಡಬಹುದು.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ರೈತರಿಗೆ ಮಾರ್ಕೆಟ್ ಕಮಿಟಿಯವರು ಸೌಲಭ್ಯಗಳನ್ನು ಒದಗಿಸಿಕೊಡುವುಕ್ಕೋಸ್ಕರ ಈ ಸೆಸ್‌ನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಈ ಹಣವನ್ನು ಅವರು ಖರ್ಚು ಮಾಡುವಂತಿಲ್ಲ. ಇದಲ್ಲದೆ ವರ್ಲ್ಡ್ ಬ್ಯಾಂಕಿನವರು ಕೊಟ್ಟಂಥ ಹಣವನ್ನು ತಾವು ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಹಣವನ್ನು ಖರ್ಚುಮಾಡುವುದಕ್ಕೆ ತಮಗೆ ಇನ್ನೆಷ್ಟು ವರ್ಷಗಳು ಬೇಕು ? ಇದಕ್ಕೋಸ್ಕರ ತಮ್ಮಲ್ಲಿರುವ ಹಣವನ್ನು ಖರ್ಚು ಮಾಡಿ ಮಾರ್ಕೆಟ್ ಕಮಿಟಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ಈ ಮಾರ್ಕೆಟ್ ಸೆಸ್ ಏನು ಇದೆ ಇದನ್ನು ಕಡಿಮೆ ಮಾಡುವುದಕ್ಕೆ ತಾವು ಏಕೆ ಯೋಚನೆ ಮಾಡಬಾರದು ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಮಾತನಾಡಿದ ರೀತಿ ನನಗರ್ಥವಾಯಿತು. ವರ್ಲ್ಡ್ ಬ್ಯಾಂಕ್ ಹಣ ಎಷ್ಟು ಖರ್ಚಾಯಿತು ಎನ್ನುವುದರ ಬಗ್ಗೆ ವಿವರ ನನ್ನಲ್ಲಿಲ್ಲ. ಮಾನ್ಯ ಸದಸ್ಯರು ಇದಕ್ಕೆ ಬೇರೆ ಪ್ರಶ್ನೆಯಂನ್ನು ಕಳುಹಿಸಿದರೆ ಉತ್ತರವನ್ನು ಒದಗಿಸಿಕೊಡುತ್ತೇನೆ. ಸರ್ಕಾರಕ್ಕೆ ಮಾರ್ಕೆಟ್ ಸೆಸ್‌ನ್ನು ಖರ್ಚುಮಾಡುವ ಸಾಮರ್ಥ್ಯ ಇದೆ, ಇರುವಂಥ ಹಣವನ್ನು ಮಾರ್ಕೆಟ್ ಕಮಿಟಿಯ ಡೆವಲಪ್‌ಮೆಂಟ್‌ಗಳಿಗೋಸ್ಕರ ಖರ್ಚುಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.